

ನೋಮ್ ಚಾಮ್‌ಸ್ಕಿ ನಮ್ಮ ಕಾಲದ ಬಹುಮುಖ್ಯ ಮತ್ತು ಬಹುಮುಖಿ ವಿದ್ವಾಂಸ. ಆಧುನಿಕ ಭಾಷಾಶಾಸ್ತ್ರದ ಆದ್ಯ ಪ್ರವರ್ತಕ, ತತ್ವಜ್ಞಾನಿ, ರಾಜಕೀಯ ಹಾಗೂ ಸಾಮಾಜಿಕ ವಿಶ್ಲೇಷಕ, ಮಾಧ್ಯಮ ಟೀಕಾಕಾರ. ಸಾಕಷ್ಟು ವಿಷಯಗಳನ್ನು ಕುರಿತು ಚಾಮ್‌ಸ್ಕಿ ತನ್ನ ಚಿಂತನೆಗಳನ್ನು ಮಂಡಿಸಿರುತ್ತಾನೆ. ಉದಾ: ಭಾಷಾಶಾಸ್ತ್ರ, ಯುದ್ಧ ವಿರೋಧ ನೀತಿ, ಅಮೆರಿಕದ ವಿದೇಶಾಂಗ ನೀತಿ, ಅಂತರರಾಷ್ಟ್ರೀಯ ಬಿಕ್ಕಟ್ಟುಗಳು, ಭಯೋತ್ಪಾದನೆ, ಸಾಮ್ರಾಜ್ಯಶಾಹಿತ್ವ, ಆರ್ಥಿಕ ಬಿಕ್ಕಟ್ಟು, ಜಾಗತೀಕರಣ, ಅಣು ಒಪ್ಪಂದ, ನ್ಯೂಕ್ಲಿಯರ್ ವೆಪನ್ಸ್ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು. ಚಾಮ್‌ಸ್ಕಿಯ ರಾಜಕೀಯ ಚಿಂತನೆಗಳು ಬಹಳ ತೀಕ್ಷ್ಣವಾಗಿರುತ್ತವೆ. ತಾನು ಹೇಳುವ ಸತ್ಯಗಳನ್ನು ನಿರೂಪಿಸುವುದಕ್ಕೆ ಬೇಕಾಗುವ ನಿಖರ ಮಾಹಿತಿ ಹಾಗೂ ಪುರಾವೆಗಳಿಂದ ತನ್ನ ವಾದವನ್ನು ದೃಢೀಕರಿಸಿರುವುದು ಚಾಮ್‌ಸ್ಕಿ ಬರಹಗಳ ವಿಶೇಷ. ಅಮೆರಿಕ ದೇಶದ 'Imperial grand strategy'ಯ ಎಲ್ಲ ಬಗೆಯ ಒಳಸುಳಿಗಳನ್ನು ಹಾಗೂ ಒಳ ಹುನ್ನಾರಗಳನ್ನು ಈತನು ಅತ್ಯಂತ ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾನೆ. ತನ್ನ ಈ ವಿಶ್ಲೇಷಣೆಗಳಿಂದ ಅಮೆರಿಕ